ಶ್ರೀ ಎಂ.ಜಿ. ಜರತಾರ್‌ಗರ್.—ವಿಶ್ವಬ್ಯಾಂಕಿನಿಂದ ಹಣ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದಿರಿ. ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ ಹಣ ತೆಗೆದುಕೊಳ್ಳತಕ್ಕ ಪ್ರಯತ್ನ ಆಗಿದೆಯೇ ?

ಶ್ರೀ ಹೆಚ್.ಡಿ. ದೇವೇಗೌಡ.—ಕೇಂದ್ರ ಸರ್ಕಾರ ಪ್ಲಾನ್ ಪ್ರಾಜೆಕ್ಟ್‌ಗಳಿಗೆ ಏನು ಕೊಡಬೇಕೋ ಅದನ್ನು ಕೊಡತಕ್ಕ ಭಾಗಾಂಶವಿದೆ. ಇದೂ ಪ್ಲಾನ್ ಪ್ರಾಜೆಕ್ಟ್‌ಲ್ಲಿ, ನಾನ್ ಪ್ಲಾನ್ ಪ್ರಾಜೆಕ್ಟ್ ಅಲ್ಲ. ಇದನ್ನು ಏಳನೆಯ ಪ್ಲಾನ್‌ನಲ್ಲಿ ತೊಡಗಿಸತಕ್ಕ ಬಗ್ಗೆ ಸಾಕಷ್ಟು ಇಕ್ಕಟ್ಟು ಇದೆ. ಇದಕ್ಕೆ ದುಬಾರಿ ವೆಚ್ಚವಾಗುತ್ತದೆ. ಆದರೂ ಇರತಕ್ಕ ಇತಿಮಿತಿಯೊಳಗೆ ನೋಡಿಕೊಂಡು ಇದಕ್ಕೆ ಹಣವನ್ನು ತೊಡಗಿಸುವುದಕ್ಕೆ ಕಷ್ಟವಿದೆಯೆಂದು ಹೇಳಿದ್ದೇನೆ. ಬೇರೆ ಬೇರೆ ಸಂಸ್ಥೆಗಳಿಂದ ಏನಾದರೂ ಹಣ ತೊಡಗಿಸುವುದಕ್ಕೆ ಸಾಧ್ಯವೇ ಎಂಬ ಯೋಚನೆ ಇದೆ. ಅದು ಇಲ್ಲದೇ ಹೋದರೆ ಏನೇ ಪ್ಲಾನ್‌ನಲ್ಲಿ ಸೇರಿಸುವುದಕ್ಕೆ ಪರಿಶೀಲನೆ ಮಾಡುತ್ತೇನೆ, ಆಶ್ವಾಸನೆ ಕೊಡುವುದಿಲ್ಲ. ಏಕೆಂದರೆ ಆಶ್ವಾಸನೆ ಕೊಟ್ಟು ನಿಮ್ಮ ಟೀಕೆಗೆ ನಾನು ಒಳಗಾಗುವುದಿಲ್ಲ.

ಕೃಷ್ಣಮೇಲ್ದಂಡೆ ಯೋಜನೆಯಿಂದ ರಾಯಚೂರು ಜಿಲ್ಲೆಯ ಜಮೀನಾಂಗಳಿಗೆ ನೀರು ಕೊಡುವ ವ್ಯವಸ್ಥೆ

(೪೪೯) ೧೧೨೪ ಡಾ|| ಸಂಗಮೇಶ್ವರ ಸರದಾರ (ರಾಯಚೂರು).—ಪಾವ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಯಚೂರು ಜಿಲ್ಲೆಯಲ್ಲಿರುವ ಲಿಂಗಸಗೂರು, ದೇವದುರ್ಗ, ರಾಯಚೂರು ತಾಲ್ಲೂಕಿನ ಜಮೀನು ಕೃಷ್ಣ ಮೇಲ್ದಂಡೆಯ ಎಡನಾಲೆ ಕೆಳಗೆ ಬರುವುದರಿಂದ ಮೊದಲನೇ ಹಂತದಲ್ಲಿ ಈ ಜಮೀನುಗಳಿಗೆ ನೀರು ಕೊಡುವ ವ್ಯವಸ್ಥೆ ಮಾಡುವುದು ಸರ್ಕಾರದವರಲ್ಲಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ನೀರು ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಪೂರ್ಣಗೊಳಿಸುವರು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈ ತಾಲ್ಲೂಕುಗಳು ಎಡದಂಡೆ ಕಾಲುವೆ ಕೆಳಗೆ ಬರುವುದಿಲ್ಲ. ಆದ್ದರಿಂದ ಮೊದಲನೇ ಹಂತದಲ್ಲಿ ನೀರು ಕೊಡಲು ಬರುವುದಿಲ್ಲ.

ಆ) ಈ ತಾಲ್ಲೂಕುಗಳ ಜಮೀನುಗಳು ಕೃಷ್ಣ ಮೇಲ್ದಂಡೆ ಯೋಜನೆಯ ಎರಡನೇ ಘಟ್ಟದಲ್ಲಿ ನೀರಾವರಿಗೆ ಒಳಪಡುತ್ತವೆ.

ಲಿಂಗಸಗೂರು, ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳು ಎಡದಂಡೆ ಕಾಲುವೆ ಕೆಳಗೆ ಬರುವುದಿಲ್ಲ ಎಂದು ಹೇಳಿದ್ದೇನೆ. ಬಲದಂಡೆಯಿಂದ ೫ ಲಕ್ಷ ೮ ಸಾವಿರ ಎಕರೆಗೆ ನೀರಾವರಿಯಾಗುತ್ತದೆಂದು ಇಷ್ಟು ಮಾತ್ರ ಹೇಳುತ್ತೇನೆ. ಇನ್ನೂ ಫಸ್ಟ್ ಸ್ಟೇಜ್ ಮುಗಿದಿಲ್ಲ, ಸೆಕೆಂಡ್ ಸ್ಟೇಜ್‌ಗೆ ಕೈಹಾಕತಕ್ಕದ್ದು ಈಗಂತೂ ಸಾಧ್ಯವಿಲ್ಲ.

ಡಾ|| ಸಂಗಮೇಶ್ವರ ಸರದಾರ್.—ಆದು ಸ್ವಲ್ಪ ತಪ್ಪಾಗಿದೆ, ಬಲದಂಡೆ ಎಂದು ಬರೆಯುವುದಕ್ಕೆ ಬದಲಾಗಿ ಎಡದಂಡೆಯಾಗಿದೆ. ಎರಡನೆಯದು ಏನೆಂದರೆ, ಶ್ರೀಮಾನ್ ವಿರೇಂದ್ರಪಾಟೀಲರು ಒನ್‌ಸೈಡೆಡ್ ಪ್ರಾಜೆಕ್ಟ್ ತೆಗೆದುಕೊಳ್ಳೋಣ ಎಂದು ಮಾಡಿದುದರಿಂದ ಅನ್ಯಾಯವಾಗಿದೆ. ನಮಗೆ ನದಿ ಇಲ್ಲವೇ, ಹಕ್ಕು ಇಲ್ಲವೇ. ಫಸ್ಟ್ ಸ್ಟೇಜ್ ಮುಗಿಯಲಿಕ್ಕೆ ೧೫ ವರ್ಷಗಳಾಗುತ್ತದೆ. ನಮ್ಮ ಜಿಲ್ಲೆಗೆ ಅನ್ಯಾಯವಾಗಿದೆ. ನಮ್ಮ ಪ್ರದೇಶ ಬರಗಾಲದ ಪ್ರದೇಶ. ಆಲ್ಲಿಗೆ ಏನಾದರೂ ಮಾಡಿ ನೀರನ್ನು ಕೊಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಪಾವ್ಯ ಸದಸ್ಯರು ಬರಗಾಲ ಪ್ರದೇಶ ಎಂದು ಹೇಳಿದ್ದಾರೆ. ಅದರಲ್ಲಿ ಸತ್ಯಾಂಶವಿದೆ, ಆದು ಬರಗಾಲ ಪ್ರದೇಶ ನಿಜ. For the 2nd phase of I Stage we need Rs. 600 crores. For that we are approaching World Bank. I have already made it clear to complete the two phases

of I stage it will cost nearly Rs. 1050 crores. ಆದರಿಂದ ಎರಡನೆಯ ಫೇಸಿನ ಸೆಕೆಂಡ್ ಸ್ಟೇಜ್ ಮುಗಿಸುವುದಕ್ಕೆ ೬೦೦ ಕೋಟಿಗೆ ವಿಶ್ವಬ್ಯಾಂಕ್ ಮುಂದೆ ಹೋಗುತ್ತಾ ಇವೆ. ಅದು ಆದಮೇಲೆ ಸೆಕೆಂಡ್ ಸ್ಟೇಜ್ ಬರುತ್ತದೆ. ಮಾನ್ಯ ಸದಸ್ಯರ ಕಳಕಳಿಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಆದರೆ ನಿಸ್ಸಹಾಯಕವಾದಂಥ ಪರಿಸ್ಥಿತಿಯಲ್ಲಿದ್ದೇವೆ.

ಡಾ|| ಸಂಗಮೇಶ್ವರ ಸರ್ದಾರ್.—ಈಗ ಅಲ್ಲಿ ನೀರು ಉಳಿಯುತ್ತದೆ. ಅದನ್ನು ಏನು ಮಾಡುತ್ತೀರಿ ?

ಶ್ರೀ ಹೆಚ್ ಡಿ. ದೇವೇಗೌಡ.—ಕೃಷ್ಣ ಬೇಸಿನಲ್ಲಿ ಪೂರ್ಣ ಆಣೆಕಟ್ಟನ್ನು ಕಟ್ಟಿದ ಮೇಲೆ ಹಿಡಿದ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಸರಿಯಾದ ರೀತಿಯಲ್ಲಿ ಲೆಕ್ಕಾಚಾರ ಆದಕ್ಕೆ ತಕ್ಕಂತೆ ಪ್ಲಾನ್ ಮಾಡಿದ್ದೇವೆ.

ಶ್ರೀ ಸುಧೀಂದ್ರಗೌಡ ಕಸಬೆ.—ಅಪ್ಪರ್ ಕೃಷ್ಣ ರೈಟ್ ಬ್ಯಾಂಕ್ ಕೆಳಗೆ ರಾಯಚೂರು, ಲಿಂಗಸೂಗೂರು, ದೇವದುರ್ಗ ಬರುತ್ತದೆ. ಮಾನ್ಯ ಮಂತ್ರಿಗಳು ೮ ಲಕ್ಷದ ಅಂದಾಜು ಇದೆ ಎಂದು ಹೇಳಿದ್ದಾರೆ. ಇದುವರೆಗೆ ಅಪ್ಪರ್‌ಕೃಷ್ಣ ರೈಟ್ ಬ್ಯಾಂಕ್‌ನಲ್ಲಿ, ಮೈನ್ ಕೆನಾಲ್ ಆಗಲಿ, ಸಬ್ ಡಿಸ್ಟ್ರಿಬ್ಯೂಟರೈಸ್‌ಗೆ ಆಗಲಿ, ಬ್ಲೂಪ್ರಿಂಟ್ ತಯಾರು ಮಾಡಿಲ್ಲ. ಆದುದರಿಂದ ತಮ್ಮ ಮುಖೇನ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಆಟಲಿ ಸ್ಟ್ ಮೇನ್ ಕೆನಾಲ್ ಸಬ್ ಡಿಸ್ಟ್ರಿಬ್ಯೂಟರ್ಸ್ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿಸಿ, ಬ್ಲೂಪ್ರಿಂಟ್ ಮಾಡಿಸುತ್ತೀರಾ ? ಈ ಬಗ್ಗೆ ಒಂದು ತಾಂತ್ರಿಕ ವಿಭಾಗವನ್ನು ನೇಮಕ ಮಾಡಿ, ಸರ್ವೆ, ಇನ್‌ವೆಸ್ಟಿಗೇಷನ್ ಮತ್ತು ಬ್ಲೂಪ್ರಿಂಟ್ ಮಾಡುವುದಕ್ಕೆ ಏರ್ಪಾಟು ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಸರ್ವೆ ಮಾಡಿಸಿದರೆ ಮಾತ್ರ ನೀರು ಹೋಗುತ್ತದೆ. ಎಂಬುದು ಖಾತ್ರಿಯಾಗುತ್ತದೆಂಬ ಭಾವನೆ ಅವರ ಮನಸ್ಸಿನಲ್ಲಿದೆ. ಈ ಭಾವನೆಯಿಂದ ಅವರು ಪ್ರಶ್ನೆ ಕೇಳಿದ್ದಾರೆ. ನೀರು ಕೊಡುವುದು ಖಾತ್ರಿ ಇದೆ. The Government is committed to give water to the extent of 5 lakh acres in Raichur District. The only problem is of finances. Unless we complete the second phase of the first stage, we can not proceed for the second stage. ಫಸ್ಟ್ ಸ್ಟೇಜ್ ಮುಗಿಸಲಿಕ್ಕೆ ೬೦೦ ಕೋಟಿ ರೂಪಾಯಿಗಳು ಬೇಕು. ಅದಕ್ಕೆ ವರ್ಲ್ಡ್ ಬ್ಯಾಂಕಿಗೆ ನಾವು ಹೋಗಬೇಕಾಗುತ್ತದೆ.

ಹೊನ್ನಾವರಕ್ಕೆ ಮಂಜೂರಾದ ಅಂಗನವಾಡಿ ಕಾರ್ಯಕ್ರಮವನ್ನು ಯಲ್ಲಾಪುರಕ್ಕೆ ಸ್ಥಳಾಂತರಿಸಿದ ಬಗ್ಗೆ

ಡಾ|| ವಿ. ಪಿ. ಕರ್ಕಿ(ಕುಮಟಾ).—ಮಾನ್ಯ ಕಲ್ಯಾಣ ಹಾಗೂ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ೧೯೮೨-೮೪ನೇ ಸಾಲಿನಲ್ಲಿ ಹೊನ್ನಾವರಕ್ಕೆ ಮಂಜೂರಾದ ಅಂಗನವಾಡಿ ಕಾರ್ಯಕ್ರಮವನ್ನು ಯಲ್ಲಾಪುರಕ್ಕೆ ಸ್ಥಳಾಂತರಿಸಲು ಕಾರಣವೇನು ?

ಆ) ೧೯೮೪-೮೫ ರಲ್ಲಾದರೂ ಹೊನ್ನಾವರನ್ನು ಅಂಗನವಾಡಿ ಕಾರ್ಯಕ್ರಮದಲ್ಲಿ ಸೇರಿಸಲು ಸರಕಾರದವರು ಕ್ರಮಕೈಕೊಳ್ಳುವರೇ ?

ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಇಲಾಖೆಯ ಸಚಿವೆಯರು)

ಅ) ಹೊನ್ನಾವರ ತಾಲ್ಲೂಕಿಗೆ ೧೯೮೩-೮೪ರಲ್ಲಿ ಅಂಗನವಾಡಿ ಯೋಜನೆಯನ್ನು ಮಂಜೂರು ಮಾಡಿರುವುದಿಲ್ಲ ಆದುದರಿಂದ ಯೋಜನೆಯನ್ನು ಹೊನ್ನಾವರದಿಂದ ಯಲ್ಲಾಪುರಕ್ಕೆ ಸ್ಥಳಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಇದನ್ನು ಪರಿಶೀಲಿಸಲಾಗುವುದು.